

## ಕತ್ತಿ ಅವರೇಕಾಯಿ

ಬೆಂಗಳೂರಿನಂತಹ ಸಿಟಿಯಲ್ಲಿ ಸುಲಭವಾಗಿ ಬೆಳೆಯಬಹುದಾದ ತರಕಾರಿಗಳಲ್ಲಿ ಕತ್ತಿ ಅವರೆಕಾಯಿಯೂ ಒಂದು. ಇದು ಸಂಪೂರ್ಣ ಬೆಳೆದಾಗ ಸುಮಾರು ಒಂದರಿಂದ ಒಂದೂವರೆ ಅಡಿಯಷ್ಟು ಉದ್ದವಾಗುತ್ತದೆ. ಈ ಕಾಯಿಯು ಕತ್ತಿಯ ಆಕಾರವಾಗಿ ಬೆಳೆಯುವುದರಿಂದ ಇದಕ್ಕೆ 'ಕತ್ತಿ ಅವರೇಕಾಯಿ' ಅಂತಲೇ ಹೆಸರು ಬಂದಿದೆ.

ಇದರಲ್ಲಿ ವಿಟಮಿನ್ 'ಎ' ಜೀವಸತ್ವ ಹೇರಳವಾಗಿದೆ. ಹಾಗೆ ಪ್ರೊಟೀನ್, ಕಬ್ಬಿಣ, ಶರ್ಕರ ಅಂಶಗಳೂ ತುಂಬಿದ್ದು ಆರೋಗ್ಯಕ್ಕೆ ಅತಿ ಉತ್ತಮ. ಗಿಡವನ್ನು ಬೆಳೆಸುವುದೂ ತುಂಬಾ ಸುಲಭ. ದೊಡ್ಡ ಬಕೇಟಿನಲ್ಲಿ ಮಣ್ಣನ್ನು ತುಂಬಿ ನಿಮ್ಮ ಮನೆಯ ಗೋಡೆಗೆ ತಾಗಿಸಿ ಅಥವಾ ಬಾಲ್ಕನಿಯಲ್ಲಿ ಬೆಳೆಸಬಹುದು. ಇದು ಬೆಳೆದಂತೆ ತುಂಬಾ ಟಿಸಿಲೊಡೆಯುವುದರಿಂದ ತೆರೆದ ಜಾಗವಿದ್ದರೆ ಒಳ್ಳೆಯದು. ಸಾಕಷ್ಟು ನೀರು ಮತ್ತು ಬಿಸಿಲಿದ್ದರೆ, ಒಂದು ಕುಟುಂಬಕ್ಕೆ ಒಂದು ದಿನ ಪಲ್ಯಕ್ಕೆ ಸಾಲುವಷ್ಟು ಕಾಯಿಗಳು ಬಿಡುತ್ತವೆ. ಸುಮಾರು ಎಂಟರಿಂದ ಹತ್ತು ಕಾಯಿಗಳು ಒಂದು ಕೆ.ಜಿ. ತೂಗುವುದರಿಂದ ವಾಣಿಜ್ಯ ಬೆಳೆಯೂ ಹೌದು. ಇಲ್ಲಿ ಫೋಟೊದಲ್ಲಿ ತೋರಿಸಿರುವುದು ಬೆಂಗಳೂರಿನ ನಮ್ಮ ಮನೆಯ ಬಾಲ್ಕನಿಯಲ್ಲಿ ಬೆಳೆದಿರುವುದು. ನಮಗೆ ಜಾಸ್ತಿಯಾಗಿ ಅಕ್ಕ ಪಕ್ಕದವರಿಗೂ ಹಂಚುವಷ್ಟನ್ನು ಗಿಡ ನೆಟ್ಟ ಎರಡು ತಿಂಗಳಲ್ಲಿ ಕೊಡುತ್ತಿದೆ.

–ಆರ್.ಕೆ. ಆಡುಕಳ



## ಹೊಳೆಯತ್ತ ಬಲಭೀಮ!

ಸುರಪುರದಲ್ಲಿ ಎಲ್ಲಿ ನೋಡಿದರಲ್ಲಿ ಪಲ್ಲಕ್ಕಿಗಳದೇ ದರ್ಬಾರು. ಹೌದು, ಹೊಸ್ತಿಲ ಹುಣ್ಣಿಮೆ ಮುಂದ ಹಳ್ಳಿ ಹಳ್ಳಿಗಳಿಂದ ದೊಡ್ಡ ದೊಡ್ಡ ಪಲ್ಲಕ್ಕಿಗಳಲ್ಲಿ ಕುರುಬರು, ಅವರ ಗುರುಗಳು ಮತ್ತು ಶಿಷ್ಯಂದಿರು ಕುದುರೆಗಳ ಸಮೇತ, ತಲೆಗೆ ಮುಂಡಾಸು ಸುತ್ತಿ, ಕಂಬಳಿ ಹೊದ್ದುಕೊಂಡು ನೂರಾರು ಜನರು ಕೃಷ್ಣಾ ನದಿಗೆ ಹೋಗಿ ಪೂಜೆ ಮಾಡಿಕೊಂಡು ದೇವರಿಗೆ ಅಡ್ಡಬಿದ್ದು ಬರುತ್ತಾರೆ.

ಇಡೀ ರಾತ್ರಿಯೆಲ್ಲಾ ಬರಿಗಾಲಿನಿಂದ ನಡೆದು ಹರಕೆ ತೀರಿಸುತ್ತಾರೆ. ಇಂತಹ ಚಳಿಯಲ್ಲಿಯೂ ಈ ಪಾದಯಾತ್ರೆ ಭಾರಿ ಜೋರದಾರ್ ನಡೆಯುತ್ತದೆ. ಅಲ್ಲಿ ಬಲಭೀಮನಿಗೆ ಭಕ್ತಿಯ ಪರಾಕಾಷ್ಠೆಯ ಅಭಿಷೇಕವಾಗುತ್ತದೆ. ಹಾದಿಗುಂಟ ಮಂಡಳು (ಚುರುಮುರಿ) ಚುಕ್ಕೋಳು (ಹುಡುಗರು) ಹಾರಿಸುತ್ತ ಹೋಗುತ್ತವೆ.

–ಶ್ರೀನಿವಾಸ ಜಾಲವಾದಿ, ಸುರಪುರ





## ಇದು ಇಲಿಯಪ್ಪನ ಪೂಜೆ

ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು ತಾಲ್ಲೂಕಿನ ಕೊಂಡ್ಲಹಳ್ಳಿ ಕೈಮಗ್ಗದ ರೇಷ್ಮೆ ಸೀರೆಗೆ ಹೆಸರುವಾಸಿ. ಆದರೆ ರೇಷ್ಮೆ ನೂಲುಗಳನ್ನು ಕಡಿದುಹಾಕುವ ಇಲಿಗಳ ಕಾಟದಿಂದ ತಪ್ಪಿಸಿಕೊಳ್ಳುವುದೇ ನೇಕಾರರಿಗೆ ದೊಡ್ಡ ತಲೆನೋವು.

ಇಲಿ ಕಾಟವನ್ನು ತಡೆಯುವ ಆಶಯದಿಂದ ಇಲ್ಲಿನ ನೇಕಾರರು ಆಚರಣೆಯೊಂದನ್ನು ನಡೆಸಿಕೊಂಡು ಬಂದಿದ್ದಾರೆ. ಅದೇ 'ಇಲಿಯಪ್ಪನ ಪೂಜೆ'. ಗಣೇಶನ ಹಬ್ಬದಂದು ಮೂಷಿಕನಿಗೆ ವಿಶೇಷ ಪೂಜೆ ಸಲ್ಲಿಸುವ ವಾಡಿಕೆ ಇಲ್ಲಿದೆ. ಪೂಜೆ ವೇಳೆ ಹಬ್ಬದ ದಿನ ನೇಯ್ಗೆಯ ಉಪಕರಣಗಳು, ರೇಷ್ಮೆ ನೂಲನ್ನು ಇರಿಸಿ, ಮಾವಿನ ಎಲೆಯ ತೋರಣ ಕಟ್ಟಿ, ಅವುಗಳಿಗೆ ವಿಭೂತಿ, ಕುಂಕುಮ ಹಚ್ಚಿ, ಗರಿಕೆ ಹುಲ್ಲು ಇರಿಸಿ, ತೆಂಗಿನಕಾಯಿ ಒಡೆದು ಪೂಜಿಸುತ್ತಾರೆ.

ಪೂಜೆಗೆ ಪಾಯಸ, ಅನ್ನ ಎಡೆಯಿರಿಸಿ ಮಗ್ಗದ ಮುಂದೆ ಹಾಗೂ ಮನೆಯ ಎಲ್ಲ ಮೂಲೆಗಳಲ್ಲೂ ನೈವೇದ್ಯ ಇರಿಸುತ್ತಾರೆ. ಯಾವುದೇ ವಿಘ್ನ ಬಾರದಂತೆ ಕೃಪೆ ತೋರಲು ನಮಿಸುತ್ತಾರೆ. ಇಲಿರಾಯ ನೂಲು ಕಡಿಯದಂತೆ ಕೋರಿಕೊಂಡು ಪೂಜೆ ನೆರವೇರಿಸುವ ರೂಢಿ ಎನ್ನುತ್ತಾರೆ ಗ್ರಾಮದ ಹಿರಿಯ ನೇಕಾರ ತಿಪ್ಪೇಸ್ವಾಮಿ.

–ಟಿ. ರಾಮಚಂದ್ರಪ್ಪ, ಚಿತ್ರದುರ್ಗ